1273ರ ಪ್ರಶ್ನೆಯಲ್ಲಿ ಅಚ್ಚಾಗಿರುವುದು ಹೀಗಿದೆ :

"ಪ್ರಯಾಣಿಕರ ಹಿತದೃಷ್ಟಿಯಿಂದ ಮತ್ತು ಇಲಾಖೆಯವರು ಕೆಲಸವನ್ನು ಹೆಚ್ಚಿನ ದಕ್ಷತೆಯಿಂದಲೂ ಉಪಯೋಗಕಾರಿಯಾಗಿ ನಡೆಸಲು ಸಹಕಾರಿಯಾಗಿರುವಂತೆ ಹೈದರಾಬಾದು ಕರ್ನಾಟಕ ರಸ್ತೆ ಸಾರಿಗೆಯ ಇಲಾಖೆಯ ಆಫೀಸುಗಳಲ್ಲಿ ನೇಮಿಸಲ್ಪಟ್ಟಿರುವ ಸಿಬ್ಬಂದಿ ವರ್ಗದವರನ್ನು ಸರಕಾರದವರು ಈ ರಾಜ್ಯದ ಬೇರೆ ಕೆಲವು ಭಾಗಗಳಿಗೆ ವರ್ಗಾಯಿಸುವ ಉದ್ದೇಶವನ್ನು ಹೊಂದಿದ್ದಾರೆಯೇ ?"

ಇದರಲ್ಲಿ ಏನು ವ್ಯತ್ಯಾಸವಿದೆ ಎನ್ನುವುದು ಅವರೇ ಹೇಳಬೇಕು. ನನಗೆ ತಿಳಿದಂತೆ ಇದರಲ್ಲಿ ಏನೂ ವ್ಯತ್ಯಾಸವಿಲ್ಲ. ಸ್ವಲ್ಪ ಶಬ್ದಗಳಲ್ಲಿ ಮಾರ್ಪಾಡು ಮಾಡಲಾಗಿದೆ ಅಷ್ಟೆ.

ಶ್ರೀ ಬಿ. ಕೆ. ನಾಗೂರ್.—ಸ್ವಾಮಿ, ನೀವೇ ಸ್ವಲ್ಪ ಸರಿಪಡಿಸಿ ಮಾರ್ಪಾಡು ಮಾಡಿಬಿಡಿರೆಂದು ಒಪ್ಪಿಕೊಂಡಿದ್ದೀರಿ. ಹಾಗೆ ಮಾರ್ಪಾಡು ಮಾಡುವಾಗ ನಮ್ಮನ್ನು ಸ್ವಲ್ಪ ಕೇಳಿಕೊಂಡು ಏಕೆ ಮಾಡಬಾರದು ?

ಅಧ್ಯಕ್ಷರು.—ಹಾಗೆ ಕೇಳಿಕೊಂಡು ಮಾಡುವುದ ಕ್ಕಾಗುವುದಿಲ್ಲ. ಏಕೆಂದರೆ ಯಾವುದಾದರೂ ಮಾರ್ಪಾಡು ಮಾಡಬೇಕಾದರೂ ಕೆಲವು ಶಬ್ದಗಳನ್ನು ಮಾತ್ರ ಮಾರ್ಪಾಡು ಮಾಡಲಾಗುವುದು. ಅದರಲ್ಲಿ ಈಗ ಏನೂ ಹೆಚ್ಚು ಕಡಮೆ ಮಾಡಿಲ್ಲ. ತಾವು ಬರೆದಿರುವ ಪದಗಳು ಅಷ್ಟು ಸರಿಯಾಗಿಲ್ಲದ್ದರಿಂದ ಎಂದರೆ "ನೌಕರದಾರರನ್ನು" ಎಂದಿರುವುದನ್ನು "ಸಿಬ್ಬಂದಿ ವರ್ಗ" ಎಂದು ಮಾಡಿದೆ, "ಶಾಖೆ" ಎಂದಿರುವುದನ್ನು "ಇಲಾಖೆ" ಎಂದು ಮಾಡಲಾಗಿದೆ. ಶಾಖೆ ಎಂದರೂ ಒಂದೇ, ಇಲಾಖೆ ಎಂದರೂ ಒಂದೇ. ಇದರಲ್ಲಿ ಯಾವುದೂ ಹೆಚ್ಚು ಕಡಮೆ ಏನೂ ಆಗುವುದಿಲ್ಲ; ಮತ್ತು ಇದರಲ್ಲಿ ಏನೊಂದೂ ಅರ್ಥ ವ್ಯತ್ಯಾಸವೂ ಆಗುವುದಿಲ್ಲ. ಹೇಗೆ ವ್ಯತ್ಯಾಸವಾಗಿದೆ ಎಂದು ಅವರೇ ಹೇಳಬೇಕು.

ಶ್ರೀ ಬಿ ಕೆ. ನಾಗೂರ್.—ಸ್ವಾಮೀ, ಇದನ್ನು ಯಾವ ರೂಲ್ಸು ಪ್ರಕಾರ ಮಾಡಿದ್ದೀರಿ ?

ಅಧ್ಯಕ್ಷರು.—ಕ್ವಶ್ಚನ್ ರೂಲ್ಸಿನ ಪ್ರಕಾರ ಮಾಡಿದೆ. ತಾವು ಸ್ವಲ್ಪ ರೂಲ್ಸನ್ನು ಓದಿದರೆ ತಮಗೇ ಗೊತ್ತಾಗುತ್ತದೆ. ಹೀಗೆ ಮಾರ್ಪಾಡು ಮಾಡಲು ಸ್ಪೀಕರರಿಗೆ ಒಂದು ಅಧಿಕಾರವಿದೆ. ಅದರಂತೆ ಈಗ ಸ್ವಲ್ಪ ಮಾರ್ಪಾಡು ಮಾಡಲಾಗಿದೆ. ರೂಲ್ಸನ್ನು ನೋಡದೆ ತಾವು ಇಲ್ಲಿ ಹೆಚ್ಚು ಕಡಮೆಯಾಗಿದೆ ಎಂದರೆ ನಾನೇನು ಹೇಳಲಿ ?

ಶ್ರೀ ಬಿ. ಕೆ. ನಾಗೂರ್ —ನಾನು ಬರೆದ ಭಾಷೆಯಂತೆಯೇ ಕೆಲವು ಶಬ್ದಗಳನ್ನು ಹಾಕಿ ಮಾರ್ಪಾಡು ಮಾಡಲು ಇರುವ ತೊಂದರೆಯೇನು ?

ಅಧ್ಯಕ್ಷರು.—ಹೀಗೆ ಈಗ ಮಾರ್ಪಾಡು ಮಾಡಿರುವುದರಿಂದ ನಿಮಗೆ ಆಗಿರುವ ನಷ್ಟವೇನು ?

ಶ್ರೀ ಬಿ. ಕೆ. ನಾಗೂರ್.—ನಾನು ಕಳುಹಿಸಿದಂತೆ ತಾವು ಒಪ್ಪಿಕೊಳ್ಳುವುದು ಸರಿಯಾದುದಲ್ಲವೇ ?

ಅಧ್ಯಕ್ಷರು.—ತಾವು ಹೀಗೆ ಆರ್ಗ್ಯುಮೆಂಟ್ ಮಾಡುತ್ತ ಹೋಗುವುದು ಸರಿಯಾದುದಲ್ಲ. My ruling is final. ನೀವು ಇನ್ನೂ ಆರ್ಗ್ಯುಮೆಂಟು ಮಾಡುತ್ತ ಹೋಗುವುದು ಚೆನ್ನಾಗಿರುವುದಿಲ್ಲ.

ಶ್ರೀ ಬಿ. ಕೆ. ನಾಗೂರ್.—ನಾನು ಆರ್ಗ್ಯುಮೆಂಟು ಮಾಡುವುದಕ್ಕೆ ಬರುವುದಿಲ್ಲ. ತಮಗೇ ಗೊತ್ತಿಲ್ಲದಿದ್ದರೆ ನಾನೇನು ಮಾಡಲಿ.

ಅಧ್ಯಕ್ಷರು.—ಸ್ವಾಮೀ, ಉಪ ಪ್ರಶ್ನೆ ಕೇಳುವುದಿದ್ದರೆ ಕೇಳಿ, ಇಲ್ಲದಿದ್ದರೆ ಬಿಡಿ.

Question time is over.

QUESTIONS FOR ANSWERS ON THE DAY

(but not taken up).

Starting of Sugar Factories in the State.

Q.—978. Sri A. R. BADRI NARAYAN (Thirthahalli).—

Will the Government be pleased to state :—

(*a*) the number of sugar factories in the state ;

(*b*) the number they propose to start ?

A.—Sri C. M. POONACHA (Minister for Home Affairs and Industries).—

(*a*) Four.

(*b*) Government do not propose to start any sugar factory.

Scheme of Co-ordinated Maize Breeding.

Q.—1307. Sri H. V. KOUJALGI (Sampagaon I).—

Will the Government be pleased to state :—

(*a*) whether it is fact that Rockefeller Foundation, New York, has recommended the Central Government, through the Indian Council of Agricultural Research, Delhi, the scheme of co-ordinated maize breeding ;

(*b*) whether it is a fact that the Director of Agriculture, Bangalore, has recommended to the Government of Mysore to open a sub-section for the breeding and production of hybrid maize in Mysore State ;

(*c*) whether they have accepted the recommendations ;

(*d*) if so, the steps they have taken to start the said scheme ;

(*e*) the facilities or help the Rockefeller Foundation will give, if this scheme is accepted ?